# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಆಯುಕ್ತರ ಕಛೇರಿ, ಎನ್.ಆರ್.ಚೌಕ, ಬೆಂಗಳೂರು-02

ಸಂಖ್ಯೆ: ಮು.ಅ.(ಯೋ.ಕೇ.)/ಪಿ.ಆರ್/ ೧೯೦೨/16-17. ದಿನಾಂಕ: ೦೪/೨/೨೦೧೭.

## ಕಛೇರಿ ಆದೇಶ

-ಗೆ

ಪಾಲಿಕೆಯ ಎಲ್ಲಾ ವಲಯಗಳ ಮುಖ್ಯ ಅಭಿಯಂತರರು

ಮತ್ತು

ರಸ್ತೆ ಮೂಲಭೂತ ಸೌಕರ್ಯ ವಿಭಾಗದ ಮುಖ್ಯ ಅಭಿಯಂತರರು

**ವಿಷಯ:** **ನಗರದ ಆಯ್ದ ಪ್ರಮುಖ ರಸ್ತೆಗಳನ್ನು ವೈಟ್ ಟಾಪಿಂಗ್ ಮತ್ತು ಟೆಂಡರ್ ಶ್ಯೂರ್ ಮಾದರಿಯಲ್ಲಿ ಅಭಿವೃದ್ಧಿಪಡಿಸುವ ಕುರಿತು.**

**ಉಲ್ಲೇಖ:** 1. ಸರಕಾರದ ಆದೇಶ ಸಂಖ್ಯೆ ನಅಇ 199 ಎಸ್‌ಎಫ್‌ಸಿ 2016(ಭಾಗ-1) ದಿನಾಂಕ 21-06-2016

*****

ಉಲ್ಲೇಖಿತ ಸರ್ಕಾರಿ ಆದೇಶದಂತೆ ನಗರದ ಆಯ್ದ ಪ್ರಮುಖ ರಸ್ತೆಗಳನ್ನು ವೈಟ್ ಟಾಪಿಂಗ್ ಮತ್ತು ಟೆಂಡರ್ ಶ್ಯೂರ್ ಮಾದರಿಯಲ್ಲಿ ಅಭಿವೃದ್ಧಿಪಡಿಸುವ ಕ್ರಿಯಾಯೋಜನೆಯನ್ನು ಅನುಮೋದಿಸಲಾಗಿರುತ್ತದೆ. ಸದರಿ ವೈಟ್ ಟಾಪಿಂಗ್ ಮತ್ತು ಟೆಂಡರ್ ಶ್ಯೂರ್ ಯೋಜನೆಗಳು 2016-17ರ ಘನ ಸರ್ಕಾರದ ಆಯವ್ಯಯದಲ್ಲೇ ಘೋಷಣೆಯಾಗಿ ಅನುಷ್ಠಾನಗೊಳ್ಳುತ್ತಿರುವ ಪ್ರತಿಷ್ಠಿತ ಯೋಜನೆಗಳಾಗಿದ್ದು ರಸ್ತೆ ಮತ್ತು ಪಾದಚಾರಿ ಮಾರ್ಗಗಳ ಆಮೂಲಾಗ್ರ ಅಭಿವೃದ್ಧಿಯನ್ನು ಒಳಗೊಂಡಿರುತ್ತವೆ.

ಆದರೆ ಸದರಿ ರಸ್ತೆಗಳಲ್ಲಿ ಸರ್ಕಾರದ ಅನುದಾನ ಅಥವಾ ಇತರ ಅನುದಾನಗಳಲ್ಲಿ ಪಾದಚಾರಿ ಮಾರ್ಗ ಮತ್ತು ಇತರ ಅಭಿವೃದ್ಧಿ ಕಾಮಗಾರಿಗಳನ್ನು ಪ್ರಸ್ತುತ ಅನುಷ್ಠಾನಗೊಳಿಸಲು ಪ್ರಾರಂಭಿಸಬೇಕಿರುವ ಮಾಹಿತಿ ಲಭ್ಯವಾಗಿರುತ್ತದೆ. ಇದರಿಂದಾಗಿ ಯೋಜನೆಗಳು ಪುನರಾವರ್ತನೆಗೊಂಡು ಸರ್ಕಾರದ ಅನುದಾನದ ಸದ್ವಿನಿಯೋಗ ಆಗದಂತೆ ಆಗುವುದು. ಅಲ್ಲದೆ ವೈಟ್ ಟಾಪಿಂಗ್/ಟೆಂಡರ್ ಶ್ಯೂರ್ ಕಾಮಗಾರಿಗಳ ಅನುಷ್ಠಾನದಲ್ಲಿ, ಮಳೆನೀರು ಚರಂಡಿಗಳನ್ನು ಸಹ ದುರಸ್ತಿ/ಅಭಿವೃದ್ಧಿಪಡಿಸಬೇಕಿದ್ದು; ನಿಕಟಪೂರ್ವದಲ್ಲಿ ಪೂರ್ಣಗೊಳಿಸಿರುವ ಕಾಮಗಾರಿಗಳಿಗೆ ಹಾನಿಯಾಗುವ ಸಂಭವ ಇದೆ. ಇಂತಹ ಸಂದರ್ಭದಲ್ಲಿ ಕಾಮಗಾರಿಯ ಗುತ್ತಿಗೆದಾರರು "ದೋಷ ಬಾಧ್ಯತಾ ಅವಧಿಯ" ಜವಾಬ್ದಾರಿಯಿಂದ ಸಮುಚಿತವಲ್ಲದ ಮಾರ್ಗದಲ್ಲಿ ಅವಧಿಗೆ ಮುನ್ನವೇ ಮುಕ್ತರಾಗಿ ಅನುಷ್ಠಾನಗೊಂಡ ಯೋಜನೆಗಳ ಪೂರ್ಣ ಪ್ರಯೋಜನ ಸಾರ್ವಜನಿಕರಿಗೆ ದೊರಕದಂತಾಗುತ್ತದೆ.

Office of the I T Advisor ★ Palike No. 801 16/2

ಈ ಹಿನ್ನೆಲೆಯಲ್ಲಿ 2016-17ರ ಆಯವ್ಯಯದಲ್ಲಿ ಘೋಷಣೆಗೊಂಡು 2016-17 ಮತ್ತು 2017-18ರಲ್ಲಿ ಅನುಷ್ಠಾನಗೊಳ್ಳಬೇಕಿರುವ ವೈಟ್ ಟಾಪಿಂಗ್ ಮತ್ತು ಟೆಂಡರ್ ಶ್ಯೂರ್ ಮಾದರಿ ಕಾಮಗಾರಿಗಳ ಬ್ಯಾಟರಿ ಲಿಮಿಟ್‌ನಲ್ಲಿ ಇತರ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳದಿರಲು ಕಡ್ಡಾಯವಾಗಿ ಸೂಚಿಸಿದೆ.

ಸರ್ಕಾರದ ಅನುದಾನದಲ್ಲಿ ಅನುಷ್ಠಾನಗೊಳ್ಳಬೇಕಿರುವ ಕಾಮಗಾರಿಗಳು ಪುನರಾವರ್ತನೆಗೊಳ್ಳದಂತೆ ಪೂರ್ವಾನ್ವಯವಾಗಿ ಖಾತರಿಪಡಿಸಿಕೊಳ್ಳುವ ಜವಾಬ್ದಾರಿ ಎಲ್ಲ ಪಾಲಿಕೆ ಅಧಿಕಾರಿಗಳ ಮೇಲೆ ಇರುವ ಹಿನ್ನೆಲೆಯಲ್ಲಿ ಈ ಆದೇಶವನ್ನು ಉಪೇಕ್ಷಿಸಿ ವೈಟ್ ಟಾಪಿಂಗ್ ಮತ್ತು ಟೆಂಡರ್ ಶ್ಯೂರ್ ರಸ್ತೆಗಳ ಬ್ಯಾಟರಿ ಲಿಮಿಟ್‌ನಲ್ಲಿ ಇತರ ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡಿರುವುದು ಕಂಡುಬಂದಲ್ಲಿ ಸಂಬಂಧಪಟ್ಟ ಅಧಿಕಾರಿಗಳನ್ನು ನೇರ ಹೊಣೆಗಾರರನ್ನಾಗಿ ಮಾಡಿ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದೆ.

4/2/17

ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿ:

1. ವಿಶೇಷ ಆಯುಕ್ತರು (ಯೋಜನೆ)
2. ವಿಶೇಷ ಆಯುಕ್ತರು (ಹಣಕಾಸು)
3. ಪ್ರಧಾನ ಅಭಿಯಂತರರು,
4. ಸಂಬಂಧಪಟ್ಟ ಅಧಿಕಾರಿಗಳಿಗೆ
5. ಪಾಲಿಕೆಯ ಐ.ಟಿ. ಸಲಹೆಗಾರರಿಗೆ – ಪಾಲಿಕೆಯ ಜಾಲತಾಣದಲ್ಲಿ ಕಛೇರಿ ಆದೇಶವನ್ನು ಪ್ರಚುರಪಡಿಸುವುದಕ್ಕಾಗಿ.
6. ಕಛೇರಿ ಕಡತಕ್ಕೆ.

Received on
16/2/2017.